ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಅಧೀಕ್ಷಕ ಅಭಿಯಂತರರು ರವರ ಕಛೇರಿ
ಘನತ್ಯಾಜ್ಯ ವಸ್ತು ನಿರ್ವಹಣೆ ವಿಭಾಗ
ಎನ್.ಆರ್.ಚೌಕ, ಬೆಂಗಳೂರು-02
ದಿನಾಂಕ:11.06.2020.

ತಾಂತ್ರಿಕ ಮಂಜೂರಾತಿ

ವಿಷಯ:-"**Allied works for Sweep smart Project& other Repairs Works for DWCC centre in ward no 4**" ಎಂಬ ಕಾಮಗಾರಿಯ ಅಂದಾಜು ಪಟ್ಟಿಗೆ ತಾಂತ್ರಿಕ ಮಂಜೂರಾತಿ ನೀಡುವ ಬಗ್ಗೆ.

ಉಲ್ಲೇಖ:-1. ಸರ್ಕಾರದ ಆದೇಶ ಸಂಖ್ಯೆ: ನಅಇ 10 ಎಂಎನ್‌ವೈ 2018, ದಿನಾಂಕ:03.05.2019.

2. M/s. SweepSmart Waste management Pvt.Ltd., ಹಾಗೂ ಬಿಬಿಎಂಪಿ ಇಲಾಖೆಯೊಂದಿಗೆ ದಿನಾಂಕ:31.05.2019 ನಡೆದ ಪರಸ್ಪರ ಒಡಂಬಡಿಕೆ ಕರಾರು.
3. ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಕಂಡಿಕೆ(100), ದಿನಾಂಕ:30.05.2020 ರ ಆದೇಶ.
4. ಮಾನ್ಯ ಆಯುಕ್ತರವರ ಅಧಿಕಾರ ಪ್ರತ್ಯಾಯೋಜನೆಯ ಆದೇಶ ಸಂಖ್ಯೆ:ಬಿ12(1)ಪಿ.ಆರ್ /394/2019-20, ದಿನಾಂಕ:25.09.2019.
5. ಪಿ-0274, ಜಾಬ್ ಸಂಖ್ಯೆ:004-21-000001.

****

ಪ್ರಸ್ತಾವನೆ:-

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಘನತ್ಯಾಜ್ಯ ನಿರ್ವಹಣೆ ಮಾಡಲು 10 ಒಣತ್ಯಾಜ್ಯ ಸಂಗ್ರಹಣಾ ಕೇಂದ್ರಗಳ ಉನ್ನತೀಕರಣ ಕಾಮಗಾರಿಯನ್ನು ನಿರ್ವಹಿಸಲು ಉಲ್ಲೇಖ (1)ರ ಸರ್ಕಾರದ ಆದೇಶದಂತೆ M/s.SweepSmart Waste management Pvt.Ltd., ಸಂಸ್ಥೆಯವರಿಗೆ ರೂ.3,35,00,000/-ಗಳಿಗೆ ಉಲ್ಲೇಖ(2)ರಂತೆ ದಿನಾಂಕ:31.05.2019 ರಂದು ಪರಸ್ಪರ ಒಡಂಬಡಿಕೆ ಕರಾರು ಮಾಡಿಕೊಳ್ಳಲಾಗಿರುತ್ತದೆ. ಸದರಿ ರೂ.3,35,00,000/-ಗಳಲ್ಲಿ ರೂ.1,35,00,000/-ಗಳನ್ನು ಸಿವಿಲ್ ಕಾಮಗಾರಿಗಳಿಗೆ ಮೀಸಲಿರಿಸಲಾಗಿದ್ದು, "**Allied works for Sweep smart Project& other Repairs Works for DWCC centre in ward no 4**" ಕಾಮಗಾರಿಯನ್ನು ನಿರ್ವಹಿಸಲು ರೂ.22,80,000/-ಗಳಿಗೆ ಉಲ್ಲೇಖ(3)ರಂತೆ ಮಾನ್ಯ ಆಯುಕ್ತರು ಅನುಮೋದನೆ ನೀಡಿರುತ್ತಾರೆ.

ಈ ಹಿನ್ನೆಲೆಯಲ್ಲಿ ಸದರಿ ಕಾಮಗಾರಿಯ ಅಂದಾಜುಪಟ್ಟಿಯನ್ನು ರೂ.22.80 ಲಕ್ಷಗಳಿಗೆ ತಯಾರಿಸಿದ್ದು, ಕಾಮಗಾರಿಯ ಅಂದಾಜು ಪಟ್ಟಿಗೆ ತಾಂತ್ರಿಕ ಆದೇಶ ನೀಡಬೇಕಾಗಿರುತ್ತದೆ.

ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, **"Allied works for Sweep smart Project& other Repairs Works for DWCC centre in ward no 4"** ಕಾಮಗಾರಿ ಅಂದಾಜು ಪಟ್ಟಿಯನ್ನು **ರೂ.22.80 ಲಕ್ಷಗಳ (ರೂಪಾಯಿ ಇಪ್ಪತ್ತೆರಡು ಲಕ್ಷದ ಎಂಭತ್ತು ಸಾವಿರಗಳು ಮಾತ್ರ)**ಮೊತ್ತಕ್ಕೆ ತಯಾರಿಸಿ ಸಲ್ಲಿಸಿದ್ದು, ಈ ಅಂದಾಜು ಪಟ್ಟಿಗೆ ಕೆಳಕಂಡ ತಾಂತ್ರಿಕ ನಿಬಂಧನೆಗಳಿಗೆ ಒಳಪಟ್ಟು ತಾಂತ್ರಿಕ ಮಂಜೂರಾತಿ ಆದೇಶ ನೀಡಲಾಗಿದೆ. ಈ ತಾಂತ್ರಿಕ ಮಂಜೂರಾತಿಯನ್ನು ಕಾರ್ಯಪಾಲಕ ಅಭಿಯಂತರರು-3ರವರ ದಾಖಲುಪಟ್ಟಿ ಸಂಖ್ಯೆ:**SE-(SWM)/TS/01/2020-21.** ದಿನಾಂಕ:**11.06.2020** ರಂತೆ ದಾಖಲಿಸಲಾಗಿದೆ.

ತಾಂತ್ರಿಕ ನಿಬಂಧನೆಗಳು :

1. ಕೆಲಸ ಪ್ರಾರಂಭಿಸುವ ಮುನ್ನ ಕಾಮಗಾರಿ ನಡೆಯುವ ಸ್ಥಳವು ವಿವಾದಗಳಿಂದ ಮುಕ್ತವಾಗಿದೆಯೆಂದು ಪರಿಶೀಲಿಸತಕ್ಕದ್ದು.
2. ಕಾಮಗಾರಿಗೆ ಮಂಜೂರಾದ ಮೊತ್ತದ ಹಣವನ್ನು ಅದೇ ಕಾಮಗಾರಿಗೆ ಉಪಯೋಗಿಸತಕ್ಕದ್ದು.
3. ಕಾಮಗಾರಿಯನ್ನು ಮೌಲ್ಯ ಪ್ರಮಾಣ ವಿವರಣೆಯ(Standard Specification) ಪ್ರಕಾರ ನಿರ್ವಹಿಸತಕ್ಕದ್ದು.
4. ಕಾಮಗಾರಿಗೆ ಅವಶ್ಯವಿರುವ Structural Design and Drawings ಸಿದ್ಧಪಡಿಸಿ ಕೆಲಸ ಆರಂಭಿಸುವ ಮುನ್ನ ಸಕ್ಷಮ ಅಧಿಕಾರಿಗಳಿಂದ ಅನುಮೋದನೆ ಪಡೆಯತಕ್ಕದ್ದು.

11/6/2020

ಅಧೀಕ್ಷಕ ಅಭಿಯಂತರರು (ಘ.ತ್ಯಾ.ನಿ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು:-

1. ಪ್ರಧಾನ ಅಭಿಯಂತರರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಅವಗಾಹನೆಗೆ ತರಲು ತಾಂತ್ರಿಕ ಸಹಾಯಕರು ರವರಿಗೆ ಸೂಕ್ತ ಕ್ರಮಕ್ಕಾಗಿ.
2. ಮುಖ್ಯ ಅಭಿಯಂತರರು, ಘ.ತ್ಯಾ.ನಿ ರವರ ಅವಗಾಹನೆಗಾಗಿ.
3. ಕಾರ್ಯಪಾಲಕ ಅಭಿಯಂತರರು-3, ಘ.ತ್ಯಾ.ನಿ ರವರ ಮಾಹಿತಿಗಾಗಿ.
4. ಕಛೇರಿ ಕಡತಕ್ಕೆ.